(ಗೊಂದಲ)

ಅಧ್ಯಕ್ಷರು:- ಅವರು ಮಾತನಾಡುತ್ತಿದ್ದಾರೆ, ಒಂದು ನಿಮಿಷ ಸುಮ್ಮನೆ ಇರಿ. ನಿಮ್ಮ ನಾಯಕರು ಮಾತನಾಡುವಾಗ ಅವರೆಲ್ಲಾ ಸುಮ್ಮನೆ ಇರಲಿಲ್ಲವೇ? ಅವರೇನೋ ಉತ್ತರ ಹೇಳುತ್ತಿದ್ದಾರೆ ಸ್ವಲ್ಪ ಕೇಳಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಅವರು ನಮ್ಮ ಉತ್ತರವನ್ನೂ ಕೇಳುವುದಕ್ಕೆ ತಯಾರಿಲ್ಲ. ಮತ್ತೆ ಕೂಗುವುದು ಎಂದರೇನು? ಇದರ ಅರ್ಥವೇನೆಂದರೆ, ಅವರು ಏನೂ ಕೇಳುವುದಕ್ಕೆ ತಯಾರಿಲ್ಲ, ಸುಮ್ಮನೆ ಕೂಗಾಡುವುದು ಅಷ್ಟೆ. ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾಜಿಯವರು ಈಗೇನು ರೈಸ್ ಮಾಡಿದರು, ಕೆಳಹಂತದ ಅಧಿಕಾರಿಗಳು ತಪ್ಪು ಮಾಡಿದ್ದಾರೆ ಅವರಲ್ಲಿ ಡಿವಿಜನ್ ಇರುತ್ತದೆ, ನ್ಯಾಯ ಸಿಗುವುದಿಲ್ಲವೆನ್ನುವಂಥಾದ್ದನ್ನು ಹೇಳಿದ್ದಾರಲ್ಲಾ, ಅದಕ್ಕಾಗಿಯೇ ನಾವು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಇದಕ್ಕೆ ವಿಶೇಷವಾಗಿ ಅಡಿಷನಲ್ ಡೈರಕ್ಟರ್ ಜನರಲ್ ಆಫ್ ಪೊಲೀಸ್‌ನವರನ್ನು ಹಾಕಿ, ಉನ್ನತ ಅಧಿಕಾರಿಗಳ ಒಂದು ಟೀಮ್ ಮಾಡಿ ಇದನ್ನು ಇನ್‌ವೆಸ್ಟಿಗೇಷನ್ ಮಾಡಬೇಕೆನ್ನತಕ್ಕಂಥ ನಿರ್ಧಾರವನ್ನು ಮಾಡಿದ್ದೇವೆ. ಯಾರೇ ತಪ್ಪಿತಸ್ಥರು ಇರಲಿ, ಆ ಅಧಿಕಾರಿಗಳಿಗೆ ಶಿಕ್ಷೆ ಕೊಡುವುದಕ್ಕೆ ಈ ಸರ್ಕಾರ ಸಿದ್ಧ ಇದೆ, ಯಾರೂ ತಪ್ಪಿಸಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲವೆನ್ನತಕ್ಕ ಮಾತನ್ನು ಹೇಳುತ್ತೇನೆ. ನಾವು ರಕ್ಷಣೆ ಮಾಡತಕ್ಕ ಪ್ರಶ್ನೆಯೇ ಇಲ್ಲ. ಯಾರಿಗೂ ರಕ್ಷಣೆ ಕೊಟ್ಟುಕೊಂಡು ಬಂದಿಲ್ಲ, ಕೊಡುವುದೂ ಇಲ್ಲ. ನಮ್ಮ ಅಧಿಕಾರಿಗಳಲ್ಲಿ ಅಂತಹ ಡಿವಿಜನ್ಸ್ ಇಲ್ಲವೇ ಇಲ್ಲ. ಇವತ್ತು ಒಗ್ಗಟ್ಟಾಗಿ ಕೆಲಸ ಮಾಡುತ್ತಿದ್ದಾರೆಂದು ತಿಳಿದುಕೊಂಡಿದ್ದೇವೆ. ಇದರಿಂದ ಅನೇಕ ಹಗರಣಗಳು ಹೊರಗೆ ಬರುವುದಕ್ಕೆ ಸಾಧ್ಯವಾಗಿದೆ. ಇಲ್ಲದೇ ಹೋಗಿದ್ದರೆ, ಕರೀಂಲಾಲ್‌ನಂಥ ಸ್ಟಾಂಪ್ ಹಗರಣ ಬಾಂಬ್ ಬ್ಲಾಸ್ಟಾಕೇಸ್, ಅಸ್ನೋಟಿಕರ್ ಕೇಸ್, ಕಂಬಾಲಪಲ್ಲಿ ಕೇಸ್ ಇವೆಲ್ಲವನ್ನೂ ನಿಲ್ಲಿಸಲು ಆಗುತ್ತಿರಲಿಲ್ಲವೇ ಅವರು ಇವತ್ತಿನದಿವಸ ಏನೋ ಒಂದು ಹೇಳುತ್ತಾರೆ. ನಾವು ಇದನ್ನು ಏಕೆ ಪ್ರಸ್ತಾಪ ಮಾಡಿಲ್ಲವೆಂದರೆ, ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಬಾರದು ಎನ್ನತಕ್ಕ ದೃಷ್ಟಿಯಿಂದ ಅನೇಕ ವಿಷಯಗಳನ್ನು ನಾವು ಪ್ರಸ್ತಾಪ ಮಾಡಿಲ್ಲ. ಇವತ್ತು ಆ ಪೊಲೀಸ್ ಇಲಾಖೆಯಲ್ಲಿ ಒಗ್ಗಟ್ಟು ಇದ್ದ ಕಾರಣ, ಹಿಂದೆ ಯಾವುದನ್ನು ಸಾಧಿಸಿಲ್ಲ ಅದನ್ನು ಸಾಧನೆ ಮಾಡಿ ನಾವು ತೋರಿಸಿದ್ದೇವೆ. ಅದಕ್ಕಾಗಿ, ಇಷ್ಟಾದರೂ ಅರ್ಥ ಮಾಡಿಕೊಂಡು, ಈ ಒಂದು ನಿರ್ಣಯವನ್ನು ತೆಗೆದುಕೊಂಡ ಮೇಲೆ ಬಹುಶಃ ಅವರು ಸಮಾಧಾನವಾಗಿ ಇರುತ್ತಾರೆಂದು ತಿಳಿದುಕೊಂಡಿದ್ದೇನೆ.

3. ನಿರ್ಣಯ ಮಂಡನೆ

ವಿಷಯ :- ಅರಣ್ಯ ಭೂಮಿ ಸಾಗುವಳಿ ಮಾಡುತ್ತಿರುವವರನ್ನು ಒಕ್ಕಲೆಬ್ಬಿಸ ಬಾರದೆಂದು ಕೇಂದ್ರ ಸರ್ಕಾರವನ್ನು ಕೋರಲು ನಿರ್ಣಯ

ಅಧ್ಯಕ್ಷರು:- ಈಗ ಮಾನ್ಯ ಕರಿಯಣ್ಣನವರು ಅರಣ್ಯ ಭೂಮಿ ವಿಚಾರದಲ್ಲಿ ನಿರ್ಣಯವನ್ನು ಮಂಡಿಸಿ.

ಶ್ರೀ ಕರಿಯಣ್ಣ (ಹೊಳೆ ಹೊನ್ನೂರು):- ನಾವು ಫಾರೆಸ್ಟ್ ಏರಿಯಾದಿಂದ ಬಂದವರು, ನಮಗೆ ಫಾರೆಸ್ಟ್ ಇಲ್ಲದೇ ತುಂಬಾ ತೊಂದರೆಯಾಗಿದೆ. ಅದಕ್ಕಾಗಿ ಒಂದು ನಿರ್ಣಯವನ್ನು ಮಂಡಿಸುತ್ತೇನೆ.

"ಅರಣ್ಯ ಭೂಮಿಗಳನ್ನು ಅರಣ್ಯೇತರ ಉದ್ದೇಶಕ್ಕಾಗಿ ಪರಿವರ್ತಿಸುವ ಎಲ್ಲ ಪ್ರಕರಣಗಳಿಗೆ ಭಾರತ ಸರ್ಕಾರದ ಪೂರ್ವಾನುಮೋದನೆ ಅಗತ್ಯವೆಂದು ಉಪಬಂಧ ಕಲ್ಪಿಸುವ ಅರಣ್ಯ (ಸಂರಕ್ಷಣೆ) ಅಧಿನಿಯಮ, 1980ನ್ನು 25-10-1980 ರಿಂದ ಜಾರಿಗೊಳಿಸಲಾಯಿತು. ಅರಣ್ಯ ಭೂಮಿಗಳ ಪರಿವರ್ತನೆಗಾಗಿ ಭಾರತ ಸರ್ಕಾರವು ಈ ಅಧಿನಿಯಮದ ಅಡಿಯಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಿದೆ.

2. ಕರ್ನಾಟಕ ರಾಜ್ಯದ ಅರಣ್ಯ ಪ್ರದೇಶದಲ್ಲಿ ಸುಮಾರು 40-50 ವರ್ಷಗಳಿಗಿಂತಲೂ ಹೆಚ್ಚು ಸಮಯದಿಂದ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರು ಅರಣ್ಯ ಪ್ರದೇಶದಲ್ಲಿ ತಲೆತಲಾಂತರದಿಂದ ವಾಸಿಸುತ್ತಿರುವ ಬುಡಕಟ್ಟಿನ ಜನರು ಮತ್ತು ಭೂರಹಿತ ಕೃಷಿ ಕಾರ್ಮಿಕರು 1/2 ಎಕರೆಯಿಂದ 4 ಎಕರೆಗಳಿಗೊಳಪಟ್ಟು ಮನೆ ಕಟ್ಟಿಕೊಂಡು ತಮ್ಮ ಸ್ವಾಧೀನಾನುಭವದಲ್ಲಿರುವ ಅರಣ್ಯ ಜಮೀನಿನಲ್ಲಿ ಕೃಷಿ ಮಾಡಿಕೊಂಡು ತಮ್ಮ ಕುಟುಂಬ ಸಮೇತ ಜೀವನ ನಡೆಸುತ್ತಿದ್ದಾರೆ. ಇವರು ಕೃಷಿ ಮಾಡಿಕೊಂಡು ಜೀವನ ನಡೆಸುತ್ತಿರುವ ಈ ಚಿಕ್ಕ ಪ್ರಮಾಣದ ಅರಣ್ಯ ಜಮೀನುಗಳನ್ನು ಸಕ್ರಮಗೊಳಿಸಬೇಕೆಂದು ರಾಜ್ಯ ಸರ್ಕಾರ ಈ ಹಿಂದೆ ಹಲವಾರು ಬಾರಿ ಕೇಂದ್ರ ಸರ್ಕಾರವನ್ನು ಕೋರಿಗೊಂಡಿದ್ದರೂ, ಕೇಂದ್ರ ಸರ್ಕಾರ ಕೇವಲ 14,848 ಹೆಕ್ಟೇರ್ ಪ್ರೆದಶದಲ್ಲಿ ಕೃಷಿ ಮಾಡಿಕೊಂಡು ಜೀವನ ಮಾಡುತ್ತಿರುವ ಕೇವಲ 19348 ಪ್ರಕರಣಗಳನ್ನು ಮಾತ್ರ ಸಕ್ರಮಗೊಳಿಸಲು 15-5-1996ರಂದು ಆದೇಶಿಸಿದೆ. ಇನ್ನೂ 1,12,554 ಜನರು ಸುಮಾರು 91902 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಮಾಡಿಕೊಂಡು ಮತ್ತು ವಾಸಕ್ಕೆ ಚಿಕ್ಕದಾದ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಇವರುಗಳನ್ನು ಮಾನವೀಯತೆಯ ಹಿತದೃಷ್ಟಿಯಿಂದ ಒಕ್ಕಲೆಬ್ಬಿಸದಂತೆ ಮತ್ತು ಅವರವರ ಸ್ವಾಧೀನಾನುಭವದಲ್ಲಿರುವ 3 ಎಕರೆಗಳಿಗೆ ಮೀರದಂತೆ ಇರುವ ಅರಣ್ಯ ಜಮೀನುಗಳನ್ನು ಅವರವರ ಸ್ವಾಧೀನಾನುಭವಕ್ಕೆ ಒಳಪಡಿಸುವಂತೆ ತೀರ್ಮಾನಿಸಲೇಬೇಕಾಗಿದೆ. ಒಕ್ಕಲೆಬ್ಬಿಸುವುದು ಸಾಮಾಜಿಕ ನ್ಯಾಯದ ದೃಷ್ಟಿಕೋನದಿಂದ ಸರಿಯಾದ ಕ್ರಮವಲ್ಲ. ಒಕ್ಕಲೆಬ್ಬಿಸಿದರೆ ಈ ಬಡವರ್ಗದ ಜನ ನಿರಾಶ್ರೀತರಾಗುತ್ತಾರೆ. ನಿರಾಶ್ರಿತರಾದವರನ್ನು ಪುನಃ ಪುನರ್ವಸತಿ ಮಾಡುವುದು ಸರ್ಕಾರದಿಂದ ಸಾಧ್ಯವಾಗದ ಕೆಲಸ. ಆ ಪ್ರದೇಶದ ಜನರ ಪ್ರಯೋಜನಕ್ಕಾಗಿ ಶಾಲೆಗಳು ಆಸ್ಪತ್ರೆಗಳು, ಔಷಧಾಲಯಗಳು, ಸಮುದಾಯ ಭವನಗಳು ಸಹಕಾರಿಗಳು, ಪಂಚಾಯಿತಿಗಳು, ಸರ್ಕಾರದ ಸಣ್ಣ ಕೈಗಾರಿಕಾ ಶೆಡ್ಡುಗಳು ಇನ್ನಿತರ ಸೌಲಭ್ಯಗಳನ್ನು ಅಲ್ಲಿ ಕಲ್ಪಿಸಲಾಗಿದೆ. ಈ ಕಾರಣಗಳಿಂದ, ಈಗಾಗಲೇ, ರಾಜ್ಯ ಸರ್ಕಾರ ಸರ್ವೆ ಮಾಡಿ ಗುರುತು ಹಚ್ಚಿನ ಸುಮಾರು 1,12,554 ಬಡವರ್ಗದ ಕುಟುಂಬದವರು ಹಲವಾರು ವರ್ಷಗಳಿಂದ ಸ್ವಾಧೀನಾನುಭವದಲ್ಲಿದ್ದು ಕೃಷಿ ಮಾಡಿಕೊಂಡು ಜೀವನ ಸಾಗಿಸುತ್ತಿರುವ 98,978 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಅರಣ್ಯೇತರ ಚಟುವಟಿಕೆಗೆ ಮಂಜೂರು ಮಾಡುವಂತೆ ಕೇಂದ್ರ ಸರ್ಕಾರವನ್ನು ಈ ಠರಾವಿನ ಮೂಲಕ ಕೋರಲಾಗಿದೆ.

3. ಅರಣ್ಯೇತರ ಚಟುವಟಿಕೆಗೆ ಮಂಜೂರಾತಿ ಕೋರಲಾದ 98,978 ಹೆಕ್ಟೇರ್ ಜಮೀನಿನ ಐವಾಜಿಗೆ, ರಾಜ್ಯದ ಕಂದಾಯ ಇಲಾಖೆ ಅರಣ್ಯ ಇಲಾಖೆಗೆ ಈಗಾಗಲೇ "Land Bank" ಮಾಡಲು ತಾರೀಖು 7.6.1993 ರಂದು ಆದೇಶಿಸಿರುವ 2.58 ಲಕ್ಷ ಹೆಕ್ಟೇರ್ ಕಂದಾಯ ಜಮೀನಿನಲ್ಲಿ 1 ಲಕ್ಷ ಹೆಕ್ಟೇರ್ ಜಮೀನನ್ನು ಅರಣ್ಯ ಇಲಾಖೆಗೆ ಅರಣ್ಯ ಬೆಳೆಯುವುದಕ್ಕೋಸ್ಕರ

ವರ್ಗಾಯಿಸಲು ಈ ಠರಾವಿನ ಮೂಲಕ ಸರ್ಕಾರವನ್ನು ಕೋರಲಾಗಿದೆ.

4. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಒಂದು ಮಾನವೀಯತೆ ಸಮಸ್ಯೆಯನ್ನು ಮಾನವೀಯತೆಯ ದೃಷ್ಟಿಯಿಂದ ಪರಿಹರಿಸಲು ಅಗತ್ಯ ಬಿದ್ದ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಸದನ ಒತ್ತಾಯಿಸುತ್ತದೆ."

ಅಧ್ಯಕ್ಷರು:– ಪ್ರಸ್ತಾಪ ಮಂಡಿಸಲ್ಪಟ್ಟಿತು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು):– ಮಾನ್ಯ ಅಧ್ಯಕ್ಷರೇ, ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಂಥ ನಿರ್ಣಯವಾಗಿದೆ. ಮಾನ್ಯ ಕರಿಯಣ್ಣನವರು ಅರಣ್ಯ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವವರನ್ನು ಒಕ್ಕಲೆಬ್ಬಿಸದೆ ಇರುವಂತೆ ಕೇಂದ್ರ ಸರಕಾರವನ್ನು ಆಗ್ರಹಿಸಿರುವ ನಿರ್ಣಯವು ಇಡೀ ರಾಜ್ಯಕ್ಕೆ ಸಂಬಂಧಪಟ್ಟಿದ್ದು. ಆದ್ದರಿಂದ ಸರಕಾರಕ್ಕೆ ಏನೂ ಅಭ್ಯಂತರವಿಲ್ಲ.

ಅಧ್ಯಕ್ಷರು:– ಮಾನ್ಯ ಸದಸ್ಯರು ಮಂಡಿಸಿರುವ ನಿರ್ಣಯಕ್ಕೆ ಸರಕಾರದಮರ ಅಭ್ಯಂತವೇನೂ ಇಲ್ಲವೆಂದು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹೇಳಿದ್ದಾರೆ. ಅಂದರೆ ಸದಸ್ಯರಾದ ಶ್ರೀ ಕರಿಯಣ್ಣನವರು ಏನು ನಿರ್ಣಯವನ್ನು ಸದನದಲ್ಲಿ ಮಂಡಿಸಿದ್ದಾರೆ ಆ ನಿರ್ಣಯವನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

"ಅರಣ್ಯ ಭೂಮಿಗಳನ್ನು ಅರಣ್ಯೇತರ ಉದ್ದೇಶಕ್ಕಾಗಿ ಪರಿವರ್ತಿಸುವ ಎಲ್ಲ ಪ್ರಕರಣಗಳಿಗೆ ಭಾರತ ಸಾರ್ಕರದ ಪೂರ್ವಾನುಮೋದನೆ ಅಗತ್ಯವೆಂದು ಉಪಬಂಧ ಕಲ್ಪಿಸುವ ಅರಣ್ಯ (ಸಂರಕ್ಷಣೆ) ಅಧಿನಿಯಮ, 1980ನ್ನು 25-10-1980 ರಿಂದ ಜಾರಿಗೊಳಿಸಲಾಯಿತು. ಅರಣ್ಯ ಭೂಮಿಗಳ ಪರಿವರ್ತನೆಗಾಗಿ ಭಾರತ ಸರ್ಕಾರವು ಈ ಅಧಿನಿಯಮದ ಅಡಿಯಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಿದೆ.

2. ಕರ್ನಾಟಕ ರಾಜ್ಯದ ಅರಣ್ಯ ಪ್ರದೇಶದಲ್ಲಿ ಸುಮಾರು 40-50 ವರ್ಷಗಳಿಗಿಂತಲೂ ಹೆಚ್ಚು ಸಮಯದಿಂದ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರು ಅರಣ್ಯ ಪ್ರದೇಶದಲ್ಲಿ ತಲೆತಲಾಂತರದಿಂದ ವಾಸಿಸುತ್ತಿರುವ ಬುಡಕಟ್ಟಿನ ಜನರು ಮತ್ತು ಭೂರಹಿತ ಕೃಷಿ ಕಾರ್ಮಿಕರು 1/2 ಎಕರೆಯಿಂದ 4 ಎಕರೆಗಳಿಗೊಳಪಟ್ಟು ಮನೆ ಕಟ್ಟಿಕೊಂಡು ತಮ್ಮ ಸ್ವಾಧೀನಾನುಭವದಲ್ಲಿರುವ ಅರಣ್ಯ ಜಮೀನಿನಲ್ಲಿ ಕೃಷಿ ಮಾಡಿಕೊಂಡು ತಮ್ಮ ಕುಟುಂಬ ಸಮೇತ ಜೀವನ ನಡೆಸುತ್ತಿದ್ದಾರೆ. ಇವರು ಕೃಷಿ ಮಾಡಿಕೊಂಡು ಜೀವನ ನಡೆಸುತ್ತಿರುವ ಈ ಚಿಕ್ಕ ಪ್ರಮಾಣದ ಅರಣ್ಯ ಜಮೀನುಗಳನ್ನು ಸಕ್ರಮಗೊಳಿಸಬೇಕೆಂದು ರಾಜ್ಯ ಸರ್ಕಾರ ಈ ಹಿಂದೆ ಹಲವಾರು ಬಾರಿ ಕೇಂದ್ರ ಸರ್ಕಾರವನ್ನು ಕೋರಿಗೊಂಡಿದ್ದರೂ, ಕೇಂದ್ರ ಸರ್ಕಾರ ಕೇವಲ 14,848 ಹೆಕ್ಟೇರ್ ಪ್ರೆದಶದಲ್ಲಿ ಕೃಷಿ ಮಾಡಿಕೊಂಡು ಜೀವನ ಮಾಡುತ್ತಿರುವ ಕೇವಲ 19348 ಪ್ರಕರಣಗಳನ್ನು ಮಾತ್ರ ಸಕ್ರಮಗೊಳಿಸಲು 15-5-1996ರಂದು ಆದೇಶಿಸಿದೆ. ಇನ್ನೂ 1,12,554 ಜನರು ಸುಮಾರು 91902 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಮಾಡಿಕೊಂಡು ಮತ್ತು ವಾಸಕ್ಕೆ ಚಿಕ್ಕದಾದ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಇವರುಗಳನ್ನು ಮಾನವೀಯತೆಯ ಹಿತದೃಷ್ಟಿಯಿಂದ ಒಕ್ಕಲೆಬ್ಬಿಸದಂತೆ ಮತ್ತು ಅವರವರ ಸ್ವಾಧೀನಾನುಭವದಲ್ಲಿರುವ 3 ಎಕರೆಗಳಿಗೆ ಮೀರದಂತೆ ಇರುವ ಅರಣ್ಯ ಜಮೀನುಗಳನ್ನು

ಅವರವರ ಸ್ವಾಧೀನಾನುಭವಕ್ಕೆ ಒಳಪಡಿಸುವಂತೆ ತೀರ್ಮಾನಿಸಲೇಬೇಕಾಗಿದೆ. ಒಕ್ಕಲೆಬ್ಬಿಸುವುದು ಸಾಮಾಜಿಕ ನ್ಯಾಯದ ದೃಷ್ಟಿಕೋನದಿಂದ ಸರಿಯಾದ ಕ್ರಮವಲ್ಲ. ಒಕ್ಕಲೆಬ್ಬಿಸಿದರೆ ಈ ಬಡವರ್ಗದ ಜನ ನಿರಾಶ್ರೀತರಾಗುತ್ತಾರೆ. ನಿರಾಶ್ರಿತರಾದವರನ್ನು ಪುನಃ ಪುನರ್ವಸತಿ ಮಾಡುವುದು ಸರ್ಕಾರದಿಂದ ಸಾಧ್ಯವಾಗದ ಕೆಲಸ. ಆ ಪ್ರದೇಶದ ಜನರ ಪ್ರಯೋಜನಕ್ಕಾಗಿ ಶಾಲೆಗಳು ಆಸ್ಪತ್ರೆಗಳು, ಔಷಧಾಲಯಗಳು, ಸಮುದಾಯ ಭವನಗಳು ಸಹಕಾರಿಗಳು, ಪಂಚಾಯಿತಿಗಳು, ಸರ್ಕಾರದ ಸಣ್ಣ ಕೈಗಾರಿಕಾ ಶೆಡ್ಡುಗಳು ಇನ್ನಿತರ ಸೌಲಭ್ಯಗಳನ್ನು ಅಲ್ಲಿ ಕಲ್ಪಿಸಲಾಗಿದೆ. ಈ ಕಾರಣಗಳಿಂದ, ಈಗಾಗಲೇ, ರಾಜ್ಯ ಸರ್ಕಾರ ಸರ್ವೆ ಮಾಡಿ ಗುರುತು ಹಚ್ಚಿನ ಸುಮಾರು 1,12,554 ಬಡವರ್ಗದ ಕುಟುಂಬದವರು ಹಲವಾರು ವರ್ಷಗಳಿಂದ ಸ್ವಾಧೀನಾನುಭವದಲ್ಲಿದ್ದು ಕೃಷಿ ಮಾಡಿಕೊಂಡು ಜೀವನ ಸಾಗಿಸುತ್ತಿರುವ 98,978 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಅರಣ್ಯೇತರ ಚಟುವಟಿಕೆಗೆ ಮಂಜೂರು ಮಾಡುವಂತೆ ಕೇಂದ್ರ ಸರ್ಕಾರವನ್ನು ಈ ಠರಾವಿನ ಮೂಲಕ ಕೋರಲಾಗಿದೆ.

3. ಅರಣ್ಯೇತರ ಚಟುವಟಿಕೆಗೆ ಮಂಜೂರಾತಿ ಕೋರಲಾದ 98,978 ಹೆಕ್ಟೇರ್ ಜಮೀನಿನ ಐವಾಜಿಗೆ, ರಾಜ್ಯದ ಕಂದಾಯ ಇಲಾಖೆ ಅರಣ್ಯ ಇಲಾಖೆಗೆ ಈಗಾಗಲೇ "Land Bank" ಮಾಡಲು ತಾರೀಖು 7.6.1993 ರಂದು ಆದೇಶಿಸಿರುವ 2.58 ಲಕ್ಷ ಹೆಕ್ಟೇರ್ ಕಂದಾಯ ಜಮೀನಿನಲ್ಲಿ 1 ಲಕ್ಷ ಹೆಕ್ಟೇರ್ ಜಮೀನನ್ನು ಅರಣ್ಯ ಇಲಾಖೆಗೆ ಅರಣ್ಯ ಬೆಳೆಯುವುದಕ್ಕೋಸ್ಕರ ವರ್ಗಾಯಿಸಲು ಈ ಠರಾವಿನ ಮೂಲಕ ಸರ್ಕಾರವನ್ನು ಕೋರಲಾಗಿದೆ.

4. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಒಂದು ಮಾನವೀಯತೆ ಸಮಸ್ಯೆಯನ್ನು ಮಾನವೀಯತೆಯ ದೃಷ್ಟಿಯಿಂದ ಪರಿಹರಿಸಲು ಅಗತ್ಯ ಬಿದ್ದ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಸದನ ಒತ್ತಾಯಿಸುತ್ತದೆ."

ಪ್ರಸ್ತಾಪವು ಸರ್ವಾನುಮತದಿಂದ ಅಂಗೀಕೃತಗೊಂಡಿತು.

ಅಧ್ಯಕ್ಷರು:- ನಿಮಗೆಲ್ಲರಿಗೂ ಹೊಸ ವರ್ಷದ ಶುಭಾಶಯಗಳನ್ನು ಕೋರುತ್ತಾ ಸಭೆಯನ್ನು ಅನಿರ್ದಿಷ್ಟ ಕಲಾವಧಿಗೆ ಮುಂದೂಡುತ್ತಿದ್ದೇನೆ.

(ಸದನವು ತನ್ನ ಕಾರ್ಯಕಲಾಪಗಳನ್ನು 2-53 ಗಂಟೆಗೆ ಮುಕ್ತಾಯಗೊಳಿಸಿ ಅನಿರ್ದಿಷ್ಟ ಕಾಲಾವಧಿಗೆ ಮುಂದೂಡಲ್ಪಟ್ಟಿತು)

(+ಈ ಚಿಹ್ನೆ ಮಾನ್ಯ ಸದಸ್ಯರ ಟಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

5) ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೋತ್ತರಗಳು

ತಾಲ್ಲೂಕಿನ ಕೊನ್ನೂರದಲ್ಲಿ ನರಗುಂದ 110.ಕೆ.ವಿ. ಸಬ್ ಸ್ಟೇಷನ್ ಕುರಿತು

301 (2562) - ಶ್ರೀ ಯಾವಗಲ್ ಬಿ.ಆರ್. (ನರಗುಂದ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರದಿಂದ ತಾಲ್ಲೂಕಿನ ಕೊನ್ನೂರದಲ್ಲಿ 110 ಕೆ.ವಿ. ಸಬ್ ಸ್ಟೇಷನ್ ನಿರ್ಮಾಣಕ್ಕೆ ಎಂದು ಶಿಲಾನ್ಯಾಸವನ್ನು ಮಾಡಲಾಯಿತು.